# ಫ್ಲೇರಿ ಟೇಲ್ ಸಲ್ವಾರ್

ಸಲ್ವಾರ್ ಫ್ಯಾಷನ್ ಇಂದು ನಿನ್ನೆಯದಲ್ಲ. ಸಾಕಷ್ಟು ವೈವಿಧ್ಯಮಯ ಸಲ್ವಾರ್‌ಗಳು ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೂ ತೊಟ್ಟುಕೊಳ್ಳುವುದು ಸಾಮಾನ್ಯ. ಇದೀಗ ಫ್ಲೇರಿ ಟೇಲ್ ಸಲ್ವಾರ್‌ಗಳು ಫ್ಯಾಷನ್ ಲೋಕಕ್ಕೆ ಲಗ್ಗೆ ಇಟ್ಟಿದ್ದು ಜನಪ್ರಿಯತೆಯನ್ನೂ ಗಳಿಸಿ ಹೊಸ ಫ್ಯಾಷನ್ ಟ್ರೆಂಡ್ ಆಗಿದೆ.

■ ಶೀಲಾ ನಟರಾಜ್



ಉಡುಪುಗಳ ಲೋಕವೊಂದು ಇತ್ತೀಚೆಗೆ ಅದ್ಭುತವಾಗಿ ತೆರೆದುಕೊಂಡಿದೆ. ನಾನಾ ವಿಧದ, ನವೀನ ವಿನ್ಯಾಸದ ಉಡುಪುಗಳು ಹೊಸ ಮನಸ್ಸುಗಳ ಸಂಭ್ರಮವನ್ನು ಹೆಚ್ಚಿಸಿವೆ. ಪಂಜಾಬಿ ಡ್ರೆಸ್‌ನಿಂದ ಆರಂಭವಾದ ಡಿಸೈನರ್ ಸಲ್ವಾರ್‌ಗಳು ಮಾರುಕಟ್ಟೆಯನ್ನು ಪ್ರವೇಶಿಸಿದ ತಕ್ಷಣವೇ ಮಹಿಳೆಯರಿಂದ ಅಭೂತಪೂರ್ವ ಪ್ರತಿಕ್ರಿಯೆ ಪಡೆಯಿತು. ಬಹುಬೇಡಿಕೆ ಪಡೆದು ಫ್ಯಾಷನ್ ಜಗತ್ತಿನಲ್ಲಿ ಭದ್ರವಾಗಿ ನೆಲೆ ನಿಂತಿತು.

ಹಾಗೆ ನೋಡಿದರೆ ಸಲ್ವಾರ್ ಫ್ಯಾಷನ್ ಇಂದು ನಿನ್ನೆಯದಲ್ಲ. ಸಲ್ವಾರ್ ಫ್ಯಾಷನ್ ಇಂದು ನಿನ್ನೆಯದಲ್ಲ. ಸಾಕಷ್ಟು ವೈವಿಧ್ಯಮಯ ಸಲ್ವಾರ್‌ಗಳು ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೂ ತೊಟ್ಟುಕೊಳ್ಳುವುದು ಸಾಮಾನ್ಯ. ಇದೀಗ ಫ್ಲೇರಿ ಟೇಲ್ ಸಲ್ವಾರ್‌ಗಳು ಫ್ಯಾಷನ್ ಲೋಕಕ್ಕೆ ಲಗ್ಗೆ ಇಟ್ಟಿದ್ದು ಜನಪ್ರಿಯತೆಯನ್ನೂ ಗಳಿಸಿ ಹೊಸ ಫ್ಯಾಷನ್ ಟ್ರೆಂಡ್ ಆಗಿದೆ.

## ಏನಿದು ಫ್ಲೇರಿ ಟೇಲ್?

ನಾವು ತಿರುಗಿದಂತೆಲ್ಲ ನಮ್ಮೊಂದಿಗೆ ಸುತ್ತುವ ಸಿಂಪಲ್ ಡಿಸೈನ್ ಉಡುಗೆ ಇದು. ನೋಡಲು ತುಂಬ ಮೋಹಕ. ಎಥ್ನಿಕ್ ಉಡುಪುಗಳ ಸಾಲಿಗೆ ಸೇರುವಂಥದ್ದು. ಸ್ಲಿಮ್ ಬೆಡಗಿಯರ ಮೆಚ್ಚುಗೆಯ ಉಡುಗೆ ಇದು. ಕಾಲೇಜು ಕನ್ಯೆಯರ ನೆಚ್ಚಿನ ಪಾರ್ಟಿ ವೇರ್ ಈ ಫ್ಲೇರಿ ಟೇಲ್. ನೋಡಲು ಸಿಂಪಲ್ ಆಗಿ ಕಾಣುವ ಈ ಡ್ರೆಸ್ ಮಲ್ಟಿ ಕಟ್ಸ್ ಹಾಗೂ ಸ್ಟಿಚ್ ಗಳನ್ನು ಹೊಂದಿದೆ. ಲಾಂಗ್ ಗೌನ್ ನಿಂದ ಹಿಡಿದು ಗಾಗ್ರಾ, ಸಲ್ವಾರ್, ಅನಾರ್ಕಲಿ, ಸಾದಾ ಚೂಡಿದಾರ್.. ಹೀಗೆ ಎಲ್ಲದಕ್ಕೂ ಫ್ಲೇರಿ ಟಚ್ ಕೊಟ್ಟರೆ ನೋಡಲು ಚೆನ್ನಾಗಿರುತ್ತದೆ.

## ಫ್ಲೇರಿ ಟೇಲ್ ಫ್ಯಾಬ್ರಿಕ್

ಫ್ಯಾಷನ್ ಟೈಲರ್ ಬಳಿ ಹೊಲಿಸಿ ಹಾಕಿಕೊಳ್ಳುವುದಾದರೆ ಬಟ್ಟೆ ನೈಲೆಕ್ಸ್, ಜಾರ್ಜೆಟ್, ನೆಟೆಡ್ ಆಗಿದ್ದರೆ ಉತ್ತಮ. ಹೆಚ್ಚು ಫ್ರಿಲ್ ಬರಬೇಕಿದ್ದರೆ ಅಗತ್ಯಕ್ಕಿಂತ ಹೆಚ್ಚು ಬಟ್ಟೆ ತೆಗೆದುಕೊಳ್ಳಿ. ರೆಡಿಮೇಡ್ ಕೊಳ್ಳುವಾಗ ಟ್ರಯಲ್ ನೋಡಿ ತೆಗೆದುಕೊಳ್ಳಿ. ನಿಮ್ಮ ದೇಹದ ಅಳತೆಗೆ ಫಿಟ್ ಆಗುವಂತೆ ಇರಲಿ. ಇಲ್ಲವಾದರೆ ಈ ಉಡುಗೆಯನ್ನು ಮತ್ತೆ ನಿಮ್ಮ ಅಳತೆಗೆ ಸರಿಪಡಿಸಲು ಬರುವುದಿಲ್ಲ.

## ಲಾಂಗ್ ಫ್ರಾಕ್

ಲಾಂಗ್ ಫ್ರಾಕ್ ಅಥವಾ ಸಲ್ವಾರ್‌ನಲ್ಲಿ ಫ್ಲೇರಿ ಡಿಸೈನ್ ಮಾಡಿಸಿಕೊಂಡರೆ ನೋಡಲು ಬಹಳ ಚೆಂದ. ಆದರೆ ಹೊಲಿಸಿಕೊಂಡರೆ ಫಿಟಿಂಗ್ ಸರಿಯಾ ಇರುವುದು. ಸಲ್ವಾರ್ ಮೆಟಿರಿಯಲ್ ಸಾಫ್ಟ್ ಆಗಿ ಇರಬೇಕು. ಜಾರ್ಜೆಟ್ ಅಥವಾ ಕ್ರೇಪ್ ಬಟ್ಟೆಯಾದರೆ ಫ್ಲೇರ್ ವಿನ್ಯಾಸ ಚೆನ್ನಾಗಿ ಮೂಡಿ ಬರುತ್ತದೆ.

## ಫ್ಲೇರ್ ಶೇಡ್ಸ್

ಈ ಉಡುಗೆಯ ವೈಶಿಷ್ಟ್ಯ ಎಂದರೆ ಶೇಡ್ಸ್. ಕೆಂಪು ಮತ್ತು ನೀಲಿ, ಹಸಿರು ಮತ್ತು ಗುಲಾಬಿ ಹೀಗೆ ಕೆಲವು ಗಾಢ ಬಣ್ಣಗಳನ್ನೇ ಇಲ್ಲಿ ಆಯ್ದುಕೊಳ್ಳಲಾಗುತ್ತದೆ. ಎದೆಯ ಮೇಲ್ಭಾಗ ಜರಿ ಮತ್ತು ಕುಂದನ್, ಲೇಸ್ ವರ್ಕ್‌ನಿಂದ ಕಂಗೊಳಿಸಿದರೆ ಸೊಂಟದಿಂದ ಕೆಳಭಾಗ ಫುಲ್ ಫ್ರಿಲ್ ಫ್ಲೇರಿ ಟೇಲ್. ಇಲ್ಲಿ ಜರಿ ಬಳಸಿ ಬಾರ್ಡರ್ ವರ್ಕ್ ಕೂಡ ಮಾಡಿಸಬಹುದು.

ಫ್ಲೇರಿ ಟೇಲ್ ಡಿಸೈನ್‌ನಲ್ಲಿ ಪ್ರಿಂಟೆಡ್ ಮೆಟಿರೀಯಲ್ ಬಳಸುವುದು ಕಡಿಮೆ. ಗಾಢ ಕುಂದನ್, ಜರಿ ವರ್ಕ್ ಸಹ ಇಲ್ಲಿ ವರ್ಜ್ಯ. ಹೂವು, ಚಿಟ್ಟೆಯಂತಹ ಫ್ಯಾಬ್ರಿಕ್ ಇಷ್ಟವಾದಲ್ಲಿ ಚಿಕ್ಕ, ಚಿಕ್ಕ ಹೂವು, ಚಿಟ್ಟೆ ಇದ್ದರೆ ಸರಿ. ನಿಮ್ಮ ಮೈಕಟ್ಟು ಸುಂದರವಾಗಿದ್ದಲ್ಲಿ ಫ್ಲೇರಿ ಟೇಲ್ ಉಡುಗೆ ಧರಿಸಿ. ಇನ್ನೂ ಹೆಚ್ಚು ಫ್ಯಾಷನೆಬಲ್ ಆಗಿ ಕಾಣಬಹುದು. ■